ವೈರಿಂಗ್ ಆಗಿಲ್ಲ ಮತ್ತು ಮುಚ್ಚಳಿಕೆ ಬರೆದು ಕೊಟ್ಟಿಲ್ಲ ಎಂದು ವರದಿ ಬಂದಿದೆ. ಆ ರೀತಿ ತಮ್ಮ ಭಾಗದ ಕೆಲಸ ಕಂಪ್ಲೀಷನ್ ರಿಪೋರ್ಟ್ ಮತ್ತು ಮುಚ್ಚಳಿಕೆ ಬರೆದು ಕೊಟ್ಟು ವಿದ್ಯುತ್ ಸರಬರಾಯಿ ಇಲ್ಲದೇ ಹೋದ ಪಕ್ಷದಲ್ಲಿ ಬಹುಶಃ ತಕ್ಷಣ ಏರ್ಪಾಡು ಮಾಡಬಹುದು.

Missing of an Idol in a Temple

610. Sri K. M. THAMMAIAH (Kadur).—

Will the Minister for Revenue be pleased to state :—

(*a*) whether it has come to the notice of the Government that an idol is missing from the Temple of Sri Channakeshavaswamy in Banavar of Arasikere Taluk in Hassan District since one and a half years :

(*b*) if so, the action taken to trace the idol and restore it to the temple ;

(*c*) the action taken to replace the idol by a new one if the Old one is not traced or traceable ?

Sri H. V. KOUJALGI (Minister for Revenue).—

(*a*) No.

(*b*) and (*c*) Will be considred on receipt of a report from the Endowment Commissioner, which has been called for.

ಶ್ರೀ ಕೆ. ಎಂ. ತಮ್ಮಯ್ಯ.—ಕೆಳಗಿನ ಅಧಿಕಾರಿಗಳಿಂದ ಮಾಹಿತಿ ಬಂದಿಲ್ಲ ಎಂದು ಹೇಳಿದ್ದೀರಿ, ಪರಿಶೀಲನೆಯಾಗುತ್ತದೆ ಎಂದು ಹೇಳಿದ್ದೀರಿ. ಪರಿಶೀಲನೆ ಮಾಡಿ ವಿಗ್ರಹ ಪತ್ತೆ ಹಚ್ಚುವುದಕ್ಕೆ ಅಗತ್ಯೇ ಇರುವುದರಿಂದ ಸದ್ಯಕ್ಕೆ ಒಂದು ಹೊಸ ಪ್ರತಿಮೆಯನ್ನು ಅಲ್ಲಿ ಪ್ರತಿಷ್ಠೆ ಮಾಡಿ. ಈ ಬಗ್ಗೆ ಅಲ್ಲಿನ ಸ್ಥಳೀಯ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಹಾಕಿದ್ದಾರೆ. ಅಲ್ಲಿಗೆ ವಿಗ್ರಹ ಕಳೆದು ಹೋಗಿದೆ ಎಂಬ ಮಾತು ಇಪತ್ತಿನವರೆಗೂ ಗೊತ್ತಿರಲಿಲ್ಲ. ಈ ಪ್ರಶ್ನೆ ಹಾಕಿದನಂತರ ನಮ್ಮ ಅಧಿಕಾರಿಗಳಿಗೆ ಪುನಃ ಚಾಲಕಸಿ ಮಾಡುವುದಕ್ಕೆ ವಹಿಸಿದ್ದೇವೆ, ಅದು ಹೋಗಿದೆ ಅಂತ ಕಂಡುಬಂದರೆ ಪುನಃ ಪರಿಶೀಲನೆ ಮಾಡುತ್ತೇವೆ.

New Syllabus for the Secondary Education

638. Sri L. SRIKANTAIAH (Nanjangud).—

Will the Minister for Education be pleased to state :—

(*a*) whether Government is introducing a new syllabus of studies for the Secondary Schools of the State and if so, from which year ;

(*b*) whether this syllabus differs from existing scheme of studies (copy of the existing scheme of studies and the and the new syllabus may be placed on the Table of the House) ;

(*c*) the duration of study in the Secondary Schools under this new syllabus ;

(SRI L. SIRKANTAIAH)

(*d*) the extent to which this new syllabus is an extension and continuation of the curricula of studies followed in standards 1 to 7;

(*e*) whether the new syllabus is applicable to the demonstration Multipurpose High Schools started by the Central Government ?

Sri N. M. KOTRABASAIAH SOGI (Deputy Minister for Education).—

(*a*) Yes; from the academic year 1969-70.

(*b*) Yes; the study of elective subjects has been removed in Standards IX and X. Work experience has been introduced in place of crafts. Copy of syllabi old and new placed on the Table of the House.***

(*c*) Three years.

(*d*) General subjects *i.e.*, Mother tongue, II language English, III language Hindi, Mathematics, Science and Social studies have been continued in the High School standards also.

(*e*) No.

ಶ್ರೀ ಎಲ್. ಶ್ರೀಕಂಠಯ್ಯ.—ಇಲ್ಲಿ ತಮ್ಮ ಉತ್ತರದಲ್ಲಿ ಹೇಳಿದ್ದಾರೆ 9 ಮತ್ತು 10 ನೇ ತರಗತಿಗಳಿಗೆ ಐಚ್ಛಿಕ ವಿಷಯಗಳ ಅಭ್ಯಾಸವನ್ನು ತೆಗೆದುಹಾಕಲಾಗಿದೆ. ಹೊಸ ಪಠ್ಯಕ್ರಮಗಳನ್ನು ನಭೆಯ ಮುಂದಿಡಲಾಗಿದೆ ಎಂದು ಹೇಳಿದ್ದಾರೆ. ಹೊಸದಾಗಿ ಇಂಟ್ರಡ್ಯೂಸ್ ಮಾಡಿರತಕ್ಕ ಸಬ್‌ಜೆಕ್ಟ್‌ಗಳು ಬರುವುದಕ್ಕೆ ಮುಂಚೆ ಜಾರಿಯಲ್ಲಿದ್ದ ಸಬ್‌ಜೆಕ್ಟ್‌ಗಳ್ಯಾವುವು ?

ಶ್ರೀ ಎಚ್. ಎಂ. ಕೊಟ್ರಬಸಯ್ಯ ಸೋಗಿ.—ಹಿಂದೆ ಫಿಜಿಕ್ಸ್, ಕೆಮಿಸ್ಟ್ರಿ ಮತ್ತು ಮ್ಯಾಥ ಮ್ಯಾಟಿಕ್ಸ್ ಈ ಸಬ್‌ಜೆಕ್ಟುಗಳಲ್ಲಿ ಮತ್ತು ಹುಮ್ಯಾನಿಟೀನ್‌ನಲ್ಲಿ—ಪಾಲಿಟಿಕ್ಸ್, ಎಕನಾಮಿಕ್ಸ್ ಇತ್ಯಾದಿ ಸಬ್‌ಜೆಕ್ಟುಗಳಲ್ಲಿ ಕೆಲವು ಭಾಗವನ್ನು ಎಲಿಮೆಂಟ್ಸ್ ಎಂದು ಮಾಡಲಾಗಿತ್ತು. ಈಗ ಅದನ್ನೆಲ್ಲಾ ತಪ್ಪಿಸಿ ಎಲ್ಲವನ್ನೂ ಕಾಮನ್ ಸಬ್‌ಜೆಕ್ಟುಗಳನ್ನಾಗಿ ಪರಿವರ್ತಿಸಿ ಎಲ್ಲವನ್ನೂ ಬೋಧಿಸ ಬೇಕೆಂದು ಹೇಳಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ವಿಷಯ ಗೊತ್ತಿದ್ದರೆ ಹೇಳಿ, ಇಲ್ಲದಿದ್ದರೆ ಗೊತ್ತಿಲ್ಲ ಅಂತ ಹೇಳಿ. ನಾನು ಕೇಳುತ್ತಿರುವುದು ಹಿಂದೆ ಇದ್ದ ಸಬ್‌ಜೆಕ್ಟ್‌ಗಳು ಯಾವುವು ಎಂದು ?

ಶ್ರೀ ಎಚ್. ಎಂ. ಕೊಟ್ರಬಸಯ್ಯ ಸೋಗಿ.—ಹಿಂದೆ ಇದ್ದವುಗಳೇ ಈಗಲೂ ಇವೆ. 1969 ರಿಂದ ಹೊಸ ಸ್ಕೀಮನ್ನು ಜಾರಿಗೆ ತರಬೇಕೆಂದು ಮಾಡಿದ್ದೇವೆ. ಈಗ ಸದ್ಯಕ್ಕೆ ಯಾವುದೂ ಬದಲಾವಣೆ ಆಗಿಲ್ಲ, ಹಿಂದಿದ್ದವುಗಳೇ ಇನ್ನೂ ಇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಆ ಸಬ್‌ಜೆಕ್ಟುಗಳು ಯಾವುವು ?

ಶ್ರೀ ಎಚ್. ಎಂ. ಕೊಟ್ರಬಸಯ್ಯ ಸೋಗಿ.—ಅವು 1969 ನಂತರ ಹೊಸ ಸಬ್‌ಜೆಕ್ಟುಗಳು ಜಾರಿಗೆ ಬರುತ್ತವೆ.

ಶ್ರೀ ಎಲ್. ಶ್ರೀಕಂಠಯ್ಯ.—ಅವು ಯಾವುವು ? ಹಳೆಯವು ಯಾವುವು ?

Sri K. V. SHANKARA GOWDA (Minister for Education).—Study of science and mathematics will be strengthened.

*** Copy placed in the Mysore Legislature Library *vide* No....